**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.**

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ : 01.12.2022
ಪಾಟಿ ಸವಾಲು : 1 ರಿಂದ 3 ನೇ ಪ್ರತಿವಾದಿ ಪರ ಶ್ರೀ ಎಂ.ಎಸ್. ವಕೀಲರಿಂದ

ನಾನು ಬಿ.ಎಸ್ಸಿ. ಬಿ.ಎಡ್. ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ತಂದೆ ಚೌಡೇಗೌಡರಿಗೆ 86 ವರ್ಷ ವಯಸ್ಸಾಗಿದೆ. ನಾನ್ನಲ್ಲದೇ ನನ್ನ ತಂದೆ ಇನ್ನೊಬ್ಬ ಮಗನಿರುತ್ತಾನೆ. ಈ ದಾವೆಯ ಸಂಪೂರ್ಣ ವಿಚಾರವನ್ನು ನಾನು ತಿಳಿದುಕೊಂಡಿದ್ದೇನೆ.

ನನ್ನ ತಂದೆ ಈ ದಾವೆಯನ್ನು ಮೂಡೇಗೌಡ ಹಾಗೂ ಆತನ ಸಹೋದರರಾದ ಬಸವೇಗೌಡ ಹಾಗೂ ಸಿ.ಚೌಡಯ್ಯನವರ ಮಗ ಶಿವಕುಮಾರ ರವರ ವಿರುದ್ದ ಕೂಡಲಕುಪ್ಪೆ ಗ್ರಾಮ ಸ.ನಂ.10/1 ರಲ್ಲಿ 30 ಗುಂಟೆ, ಸ.ನಂ.10/2 ಹಾಗೂ 10/3 ರಲ್ಲಿ 3 ಗುಂಟೆ, ಸ.ನಂ.13/1 ರಲ್ಲಿ 7 ಗುಂಟೆ ವಿಸ್ತೀರ್ಣ ಒಟ್ಟು 40 ಗುಂಟೆ ಆಸ್ತಿಯ ಸಂಬಂಧ ಸಲ್ಲಿಸಿದ್ದಾರೆ. ನಾವು ಖರೀದಿ ಮಾಡಿರುವ ಸ್ವತ್ತಿನ ಖಾತೆ ನಮ್ಮ ಹೆಸರಿಗೆ ಆಗಲಿ ಎನ್ನುವ ಪರಿಹಾರ ಕೇಳಿ ಈ ದಾವೆಯನ್ನು ನನ್ನ ತಂದೆ ಸಲ್ಲಿಸಿದ್ದಾರೆ. ನಾನು ಮೇಲೆ ತಿಳಿಸಿದ ವ್ಯಕ್ತಿಗಳನ್ನು ಹೊರತುಪಡಿಸಿ ಈ ದಾವೆಯನ್ನು ನನ್ನ ತಂದೆ ಬೇರೆ ಯಾರ ಮೇಲಿಯೂ ಸಲ್ಲಿಸಿಲ್ಲ.

ದಾವಾ ಸ್ವತ್ತು ಮೂಲ ಸಿ.ಚೌಡೇಗೌಡರಿಗೆ ಸೇರಿತ್ತು ನಂತರ ಅವರ ಕಡೆಯಿಂದ ಬಸವೇಗೌಡರಿಗೆ ಬಂದಿರುತ್ತದೆ. ಸದರಿ ಜಮೀನನ್ನು ಸಿ.ಚೌಡೇಗೌಡರು ಬಸವೇಗೌಡರಿಗೆ ಮಾರಾಟ ಮಾಡಿದ್ದಾರೆ. ಸದರಿ ಕ್ರಯ ಪತ್ರವನ್ನು ಈ ದಾವೆಯಲ್ಲಿ ಹಾಜರುಪಡಿಸಿದ್ದೇನೆ. ಸದರಿ ಕ್ರಯ ಪತ್ರದಲ್ಲಿ ದಾವಾ ಸ್ವತ್ತಿನಲ್ಲಿ ತೋರಿಸಿರುವ ಸರ್ವೆ ನಂಬರ್ ಮತ್ತು ವಿಸ್ತೀರ್ಣ ನಮೂದಾಗಿರುತ್ತದೆ. ಸಿ.ಚೌಡೇಗೌಡರು ಸ.ನಂ.10/1 ರಲ್ಲಿ 32 ಗುಂಟೆ, ಸ.ನಂ.10/2 ರಲ್ಲಿ 31 ಗುಂಟೆ, ಸ.ನಂ.10/3 ರಲ್ಲಿ 26 ಗುಂಟೆ, ಸ.ನಂ.13/1 ಎ ರಲ್ಲಿ 5 ಗುಂಟೆ, ಸ.ನಂ.13/1 ಬಿ ನಲ್ಲಿ 1 ಎಕರೆ 3 ಗುಂಟೆ ಜಮೀನನ್ನು ಬಸವೇಗೌಡರಿಗೆ ಮಾರಾಟ ಮಾಡಿದ್ದಾರೆ. ಸದರಿ ಜಮೀನುಗಳ ಪೈಕಿ 6 ಗುಂಟೆ ನಾಲಾಗೆ ಹೋಗಿದ್ದು, 17 ಗುಂಟೆ ವಿಸ್ತೀರ್ಣದಲ್ಲಿ ಸಿ.ಚೌಡಯ್ಯನವರು ಮನೆ ಕಟ್ಟಿದ್ದು ಅದನ್ನು ಹೊರತುಪಡಿಸಿ ಉಳಿದ 2 ಎಕರೆ 35 ಗುಂಟೆ ವಿಸ್ತೀರ್ಣದ ಜಮೀನನ್ನು ಬಸವೇಗೌಡರಿಗೆ ಮಾರಾಟ ಮಾಡಿದ್ದಾರೆ.

ಕ್ರಯ ಪತ್ರವನ್ನು ಹೊರತುಪಡಿಸಿ ನಾಲಾಗೆ ಹೋಗಿರುವ ವಿಚಾರ ಹಾಗೂ ಮನೆ ಕಟ್ಟಿರುವ ವಿಚಾರದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಮೇಲೆ ತಿಳಿಸಿದ ಆಸ್ತಿಗಳು ಒಂದೇ ಸರ್ವೆ ನಂಬರ್ ನಲ್ಲಿ ಇಲ್ಲ ಬೇರೆ ತಾಕುವಿನಲ್ಲಿದೆ ಎಂದರೆ ಸರಿ.

ಬೇರೆ ಬೇರೆ ತಾಕುವಿನಲ್ಲಿರುವ ಸ್ವತ್ತಿನ ಸಂಬಂಧ ಪ್ರತ್ಯೇಕವಾಗಿ ತಪಶೀಲನ್ನು ಕೊಟ್ಟಿಲ್ಲ ಎಂದರೆ ಸಾಕ್ಷಿಯು ಎಲ್ಲಾ ಜಮೀನುಗಳು ಒಟ್ಟಾಗಿ ಇರುವುದರಿಂದ ಅದಕ್ಕೆ ತಪಶೀಲನ್ನು ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ.

ನಾನು ಹೇಳಿರುವ ಜಮೀನುಗಳು ಬೇರೆ ಬೇರೆ ತಾಕುವಿನಲ್ಲಿ ಇದ್ದು ಪ್ರತ್ಯೇಕ ತಪಶೀಲಿನಲ್ಲಿ ಇದ್ದರೂ ಕೂಡ ನಮ್ಮ ಅನುಕೂಲಕ್ಕಾಗಿ ಸುಳ್ಳು ತಪಶೀಲನ್ನು ನಮೂದಿಸಿದ್ದೇವ ಎಂದರೆ ಸುಳ್ಳು.  ಎಂ.ಆರ್.16/1972-73 ಎಂದು ವಾದ ಪತ್ರದಲ್ಲಿ ನಮೂದಾಗಿರುವ ಬಗ್ಗೆ ನನಗೆ ಗೊತ್ತಿದೆ.  ಎಂ.ಆರ್.16/1972-73 ರಂತೆ ಖಾತೆ ಬದಲಾವಣೆಯಾಗದೇ ಸ.ನಂಬರ್ ಮತ್ತು ವಿಸ್ತೀರ್ಣಕ್ಕೂ ತಾಳೆ ಇಲ್ಲವೆಂದು ನಮೂದಾಗಿದೆ ಎಂದು ವಜಾ ಇದೆ ಎಂದರೆ ಸುಳ್ಳು.  ಎಂ.ಆರ್.16/1972-73 ರಲ್ಲಿ ಆದ ಆದೇಶವನ್ನು ಪ್ರಶ್ನಿಸಿ ತಹಶೀಲ್ದಾರ್ ರವರಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ.  ಸದರಿ ವ್ಯವಹರಣೆಯಲ್ಲಿ ಪ್ರತಿವಾದಿಗಳನ್ನು ಪಕ್ಷಗಾರರಾಗಿ ಮಾಡಿರಲಿಲ್ಲ ಎಂದರೆ ಸಾಕ್ಷಿಯು ಅವರನ್ನು ಸಹ ಕರೆಸಿದ್ದರು ಎಂದು ನುಡಿಯುತ್ತಾರೆ.  ಪ್ರತಿವಾದಿಗಳನ್ನು ಸದರಿ ವ್ಯವಹರಣೆಗಳಲ್ಲಿ ಪಕ್ಷಗಾರರಾಗಿ ಮಾಡಿದ್ದ ಬಗ್ಗೆ ದಾಖಲೆ ಕೊಟ್ಟಿಲ್ಲ ಎಂದರೆ ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ.  ರಾಜಸ್ವ ನಿರೀಕ್ಷಕರು ಹಾಗೂ ಗ್ರಾಮ ಲೆಕ್ಕಾಧಿಕಾರಿಯವರು ಸ್ಥಳ ಪರಿಶೀಲನೆ ಮಾಡಿ ನಕ್ಷೆ ಮಾಡಿದ್ದ ಬಗ್ಗೆ ವಾದ ಪತ್ರದಲ್ಲಿ ನಮೂದಿದ್ದು ಅದರ ಸಂಬಂಧ ದಾಖಲೆ ಪಡೆದಿದ್ದೇನೆ.  ನಾವು ಅದಕ್ಕೆ ಸಂಬಂಧಿಸಿದ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸುಳ್ಳು.

ನಾವು ಈ ದಾವೆಯನ್ನು ಸಲ್ಲಿಸಿರುವ ಪ್ರತಿವಾದಿ ಬಸವೇಗೌಡರ ಜೊತೆ ಚೆನ್ನಾಗಿರುತ್ತೇವೆ.  ಪ್ರತಿವಾದಿ ಬಸವೇಗೌಡ ಈಗ ಮೃತರಾಗಿದ್ದಾರೆ ಎಂದರೆ ಸರಿ.  ಸದರಿ ಬಸವೇಗೌಡರ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ಮಾಡಿಲ್ಲ ಎಂದರೆ ಸುಳ್ಳು. ನನ್ನ ತಂದೆಗೆ ಆದ ಕ್ರಯಪತ್ರದಲ್ಲಿ ಪ್ರತಿವಾದಿ ಬಸವೇಗೌಡ ಸಹ ಸಹಿ ಮಾಡಿರುತ್ತಾರೆ. ತಹಶೀಲ್ದಾರ್ ರವರು ಮಾಡಿದ ಆದೇಶದ ವಿರುದ್ಧ ನಾವು ಮಾನ್ಯ ಉಪವಿಭಾಗಾಧಿಕಾರಿಯವರ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದೇವೆ.  ಸದರಿ ಮೇಲ್ಮನವಿ ಸಂಬಂಧ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇವೆ.  ಮಾನ್ಯ ಉಪವಿಭಾಗಾಧಿಕಾರಿಯವರ ನ್ಯಾಯಾಲಯದಲ್ಲಿ ಕೇಸು ವಜಾ ಆಗಿರುತ್ತದೆ ಎಂದರೆ ಸರಿ. ಸದರಿ ವಜಾ ಆಗಿರುವ ಆದೇಶದ ವಿರುದ್ಧ ಮೇಲ್ಮನವಿಯನ್ನು ನನ್ನ ತಂದೆ ಸಲ್ಲಿಸಿರಲಿಲ್ಲ ಎಂದರೆ ಸರಿ.

ನಮ್ಮ ಮುಖ್ಯ ವಿಚಾರಣೆಯಲ್ಲಿ ಸ.ನಂ.10/1 ರ ಬದಲು ಆರ್.ಟಿ.ಸಿ. ಸ.ನಂ.10/2 ಎಂದು ನಮೂದಾಗಿದೆ ಎಂದು ತಿಳಿಸಿದ್ದೇವೆ ಎಂದರೆ ಸರಿ. ಸ.ನಂ.10/2, ಸ.ನಂ.10/3 ಮತ್ತು ಸ.ನಂ.13/1 ರಲ್ಲಿ ನಾವು ಸ್ವಾಧೀನದಲ್ಲಿ ಇಲ್ಲ ಆದ ಕಾರಣ ಆರ್.ಟಿ.ಸಿಯನ್ನು ನಾವು ಹಾಜರುಪಡಿಸಿಲ್ಲ ಎಂದರೆ ಸುಳ್ಳು. ದಾವೆ ಹಾಕುವ ಪೂರ್ವ ಅಥವಾ ನಂತರ ದಾವಾ ಸ್ವತ್ತಿನ ಅಳತೆಯನ್ನು ಸರ್ವೆಯರ್ ರವರಿಂದ ಗುರುತಿಸಿ ನಕ್ಷೆ ತಯಾರಿಸಿಲ್ಲ.

ದಾವ ಸ್ವತ್ತುಗಳನ್ನು ಬಿಟ್ಟು ನಮಗೆ ಸೇರಿದ ಬೇರೆ ಜಮೀನುಗಳು ಸಹ ಇವೆ ಎಂದರೆ ಸರಿ. ಸದರಿ ಸ್ವತ್ತುಗಳ ಆರ್.ಟಿ.ಸಿ ನನ್ನ ತಂದೆಯ ಹೆಸರಿನಲ್ಲಿರುತ್ತದೆ ಎಂದರೆ ಸರಿ. ದಾವಾ ಸ್ವತ್ತುಗಳಲ್ಲಿ ನಾವು ಸ್ವಾಧೀನ ಇಲ್ಲದಿದ್ದರೂ ಕೂಡ ಯಾವುದೋ ಕ್ರಯ ಪತ್ರವನ್ನು ಹಾಜರುಪಡಿಸಿ ಅದರ ಮುಖೇನ ಸ್ವಾಧೀನ ಇದ್ದೇವೆ ಎಂದು ಸುಳ್ಳು ನುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸಂಬಂಧ ನಾವು ಮಾಲೀಕರಲ್ಲ ಆದ್ದರಿಂದ ನಾವು ಪರಿಹಾರ ಕೇಳಲು ಯಾವುದೇ ಹಕ್ಕು ಇಲ್ಲವೆಂದರೆ ಸುಳ್ಳು.

ದಾವಾ ಸ್ವತ್ತಿನ ಸಂಬಂಧ ಆರ್.ಟಿ.ಸಿಗಳು ನಮ್ಮ ತಂದೆ ಹೆಸರಿನಲ್ಲಿ ಇಲ್ಲ ಅವು ನಮ್ಮ ತಾಯಿ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳ ಆರ್.ಟಿ.ಸಿಗಳು ನಮ್ಮ ತಾಯಿ ಹೆಸರಿನಲ್ಲಿರುವಬಗ್ಗೆ ನಮ್ಮ ವಾದ ಪತ್ರದಲ್ಲಿ ಅಥವಾ ನಮ್ಮ ಮುಖ್ಯ ವಿಚಾರಣೆಯಲ್ಲಿ ನುಡಿದಿಲ್ಲ ಎಂದರೆ ಸುಳ್ಳು. ಪ್ರತಿವಾದಿಯವರಿಂದ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಅವರು ಮಾಲೀಕರಾಗಿ ಸ್ವಾಧೀನದಲ್ಲಿರುವ ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರಿಸಿ ಸುಳ್ಳು ಪರಿಹಾರ ಕೋರಿದ್ದೇವೆ ಎಂದರೆ ಸುಳ್ಳು.

ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ನಾವು ಸ್ವಾಧೀನದಲ್ಲಿ ಇರುವುದರ ಬಗ್ಗೆ ತೊಂದರೆ ನೀಡಿದ್ದಾರೆಂದು ಈ ದಾವೆ ಸಲ್ಲಿಸಿಲ್ಲ ಎಂದರೆ ಸರಿ. ದಾವಾ ಸ್ವತ್ತಿನ ಹಾಜು ಬಾಜುದಾರರಿಗೂ ನಮಗೂ ಯಾವುದೇ ತಕರಾರು ಇಲ್ಲವೆಂದರೆ ಸರಿ. ದಾವಾ ಸ್ವತ್ತಿನ ಚೆಕ್ಕು ಬಂದಿ ಹೇಳಬಲ್ಲೆ. ಪೂರ್ವಃ ನರಸೇಗೌಡರ ಜಮೀನು, ಪಶ್ಚಿಮಃ ಜಿಗುಳು ಮತ್ತು ರಸ್ತೆ, ಉತ್ತರಃ 13/1 ರಲ್ಲಿ ಸಿ.ಚೌಡೇಗೌಡರ ಮನೆ, ದಕ್ಷಿಣಃ ಮೂಡೇಗೌಡರು ಹಾಗೂ ಬಸವೇಗೌಡರಿಗೆ ಸೇರಿದ ಉಳಿಕೆ ಜಮೀನು ಇರುತ್ತದೆ. ದಾವಾ ಸ್ವತ್ತಿನ ಪಶ್ಚಿಮಕ್ಕೆ ಜಿಗುಳು ಮತ್ತು ರಸ್ತೆಯಲ್ಲಿ ಮೋಹನ್ ಸೇರಿದ ಜಮೀನು ಇದೆ ಎಂದರೆ ಸರಿ. ದಾವಾ ಸ್ವತ್ತಿನ ಉತ್ತರಕ್ಕೆ ಸಿ.ಚೌಡೇಗೌಡರ ಮನೆ ಇದೆ ಎಂದು ವಾದ ಪತ್ರದ ಅನುಸೂಚಿಯಲ್ಲಿ ಬರೆಸಿದ್ದೇವೆ. ವಾದ ಪತ್ರದಲ್ಲಿನ ತಪಶೀಲಿನಲ್ಲಿ ದಕ್ಷಿಣಕ್ಕೆ ಬಸವೇಗೌಡರ ಜಮೀನು ಇದೆ

ಎಂದು ಬರೆಸಿರುತ್ತೇವೆ. ಅಧಿಕಾರ ಪತ್ರವನ್ನು ನನ್ನ ತಂದೆ ಚೌಡೇಗೌಡ ಮಾತ್ರ ಕೊಟ್ಟಿದ್ದಾರೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.